

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026 ಗಿವ್ ಟು ಗೇನ್**

## ಛಲಗಾತಿಯರು!

'ಯಶಸ್ವಿನಿ ಅವಳ ಯಶೋಗಾಥೆ' (ಮಾ. 12) ಮುಖಪುಟದಲ್ಲಿನ ಲೇಖನಗಳು ಸ್ಫೂರ್ತಿದಾಯಕವಾಗಿವೆ. ಐಕ್ಯಾಟ್ ಸಂಸ್ಥೆಯ ಸ್ಥಾಪಕಿ–ಡಾಕ್ಟರ್ ಶಾಲಿನಿ, ನಾಟಕ ಕಂಪನಿಯನ್ನು ಮುನ್ನಡೆಸುತ್ತಿರುವ ಕಲಾವಿದೆ ಜ್ಯೋತಿ ಹಾಗೂ ಸುಜಾತಾ, ಗುಮ್ಮಟಪುರದ ಕಿರಿಯ ಪೈಲಟ್ ಸಮೈರಾ, ನೀವೆಲ್ಲ ನಿಜಕ್ಕೂ ಸಾಧನೆಯ ಶಿಖರ ಏರುತ್ತಿರುವ ಛಲಗಾತಿಯರು! ಅಭಿನಂದನಾರ್ಹ ಮಾನಿನಿಯರು!

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಶುಭಾ ಅಭಿನಂದನಾರ್ಹರು...

ನೇಮಿಚಂದ್ರ ಅವರ "ವಿಮಾನ ಚಾಲಕರಿಗೆ 'ದೃಷ್ಟಿ'ಯ ರೂವಾರಿ ಶುಭ" ಲೇಖನ ಚೆನ್ನಾಗಿದೆ. ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ಅಲಭ್ಯವಾಗಿದ್ದ ಕಾಲದಲ್ಲಿ, ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಂತು, ವಿಜ್ಞಾನಿಯಾಗಿ ಸಾಧನೆ ಮಾಡಿದ ಡಾ. ಶುಭಾ ಅವರು ಅಭಿನಂದನಾರ್ಹರು.

ಅವರ ನೇತೃತ್ವದಲ್ಲಿ ಸಂಶೋಧನೆಗೊಂಡ, ಪೈಲಟ್‌ಗಳಿಗೆ ಅನುಕೂಲವಾಗುವ 'ದೃಷ್ಟಿ' ಎಂಬ ವಿನ್ಯಾಸದ ಬಗೆಗಿನ ವಿವರಣೆ ಮಾಹಿತಿಪೂರ್ಣವಾಗಿತ್ತು. ಈ ಸಂಶೋಧನೆಯಿಂದ ಶುಭಾ ಅವರು ಅನೇಕ ಪ್ರಶಸ್ತಿಗಳನ್ನು ಪಡೆದಿರುವುದು ಹೆಮ್ಮೆಯ ವಿಷಯ. ಪಿಎಚ್‌ಡಿ ಮಾಡುತ್ತಿರುವ ನನ್ನ ಮಗಳಿಗೆ ಪ್ರೇರಣೆಯಾಗಲೆಂದು ಈ ಮಾಹಿತಿಯನ್ನು ಅವಳೊಂದಿಗೆ ಚರ್ಚಿಸಿದೆವು!

–ಶೋಭಾ ಸಂಪತ್, ಬೆಂಗಳೂರು

## ಸಂಗ್ರಹಯೋಗ್ಯ

'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026 ಗಿವ್ ಟು ಗೇನ್' ಅಡಿಯಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿರುವ ಮಹಿಳಾ ಸಾಧಕರ ಬಗ್ಗೆ ತುಂಬಾ ಚೆನ್ನಾಗಿ ನಿರೂಪಿಸಲಾಗಿದೆ.

ಸಾಧನೆಗೆ ವಯಸ್ಸು ಯಾವ ಕಾರಣಕ್ಕೂ ಅಡ್ಡಿ ಬರಬಾರದು ಎಂಬ ತತ್ವದಡಿ ಇವರ ಸಾಧನೆ ಅನುಕರಣೀಯ. ಕುಟುಂಬ ಜಂಜಾಟಗಳ ನಡುವೆ ಸಾಧನೆಯ ಶೃಂಗಕ್ಕೇರಿರುವ ಇವರು ಅಭಿನಂದನಾರ್ಹರು.

–ಬಿ. ವಾಣಿ, ಮೈಸೂರು

## ತಿಟ್ಟತ್ತಿ ತಿರುಗಿ...

ಮಹಿಳೆಯರ ಯಶೋಗಾಥೆ 'ತಿಟ್ಟತ್ತಿ ತಿರುಗಿ ನೋಡಿದಾಗ' (ರೂಪಾ ಕೆ.ಎಂ.) ಲೇಖನ ಓದಿ, 'ತೊಟ್ಟಿಲ ಹೊತ್ಕೊಂಡು ತೌರ್ ಬಣ್ಣ ಉಟ್ಕೊಂಡು ತಿಟ್ಟತ್ತಿ ತಿರುಗಿ ನ್ಯೋಡಾಳೋ ತಂಗೆವ್ವ...' ಪ್ರೌಢಶಾಲೆಯಲ್ಲಿ ಓದಿದ ಪದ್ಯದ ಸಾಲುಗಳು ನೆನಪಾದುವು.

–ಪ್ರಭಾಪ್ರಸಾದ್, ಬೆಂಗಳೂರು

## ದಾರಿದೀವಿಗೆ

ಮಹಿಳಾ ದಿನಾಚರಣೆ ಸಂಚಿಕೆ ಸ್ಫೂರ್ತಿದಾಯಕವಾಗಿದೆ. ಸವಾಲುಗಳನ್ನು ಮೆಟ್ಟಿನಿಂತು ಸಾಧನೆಗೈದ ಮಹಿಳೆಯರು ಸಾಧನೆಯೆಡೆ ಸಾಗುತ್ತಿರುವವರಿಗೆ ದಾರಿದೀವಿಗೆಯಾಗಿದ್ದಾರೆ.

–ಶೇಖರಯ್ಯ ಟಿ.ಎಚ್.ಎಂ. ಗದ್ದಲಗಟ್ಟೆ



## ಕಣ್ಣಿಗೆ ಕಟ್ಟುವಂಥ ಚಿತ್ರಣ

'ಸ್ನಿಗ್ಧ ಸೌಂದರ್ಯದ ಖನಿ ಹೆಲ್ಸಿಂಕಿ' (ಮಾ. 12, ಸುಚೇತಾ ಕೆ. ನಾರಾಯಣ್) ಪ್ರವಾಸ ಕಥನ, ನಮಗೆ ಅಷ್ಟೇನೂ ಪರಿಚಿತವಲ್ಲದ ಫಿನ್‌ಲ್ಯಾಂಡ್ ದೇಶದ ರಾಜಧಾನಿ ಹೆಲ್ಸಿಂಕಿ ಕುರಿತು ಬಹಳಷ್ಟು ಮಾಹಿತಿಯನ್ನು ನೀಡಿದೆ. ಲೇಖಕಿ ಸೊಗಸಾದ ಚಿತ್ರಗಳು ಹಾಗೂ ವಿವರಣೆಯ ಮೂಲಕ ಹೆಲ್ಸಿಂಕಿಯ ಸೌಂದರ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

–ಎಚ್.ಎಸ್. ಶ್ರೀಮತಿ, ಬೆಂಗಳೂರು

## ಯುವಜನರಿಗೆ ಮಾದರಿ

'ಉದ್ಯಮ ಕಟ್ಟಿದ ಎಮ್ಮೆ ತಮ್ಮಣ್ಣ' (ಮಾ. 12, ರಾಘವೇಂದ್ರ ಕೆ. ತೊಗರ್ಸಿ) ಸೆಲೆಬ್ರಿಟಿ ಅಂಕಣ ಓದಿ ಹೆಮ್ಮೆಯೆನಿಸಿತು. ಸೋಹಲ್ ಪ್ರೀತಿ ಸಿಂಗ್ ಅವರ ಹೈನುಗಾರಿಕೆಯ ಸಾಧನೆ ಯುವಕರಿಗೆ ಮಾದರಿಯಾಗಬೇಕಿದೆ.

–ಲಕ್ಷ್ಮೀಶ ಎಂ., ಬೆಂಗಳೂರು

## ಯಶಸ್ಸಿನ ಸೋಪಾನ

'ಸ್ವಯಂ ನಿಯಂತ್ರಣದಿಂದಲೇ ಸ್ವಸ್ಥ ಜೀವನ!' (ಮಾ. 12, ಸುಷ್ಮ ಸಿಂಧು) ಪ್ರಸ್ತುತ, ಅಗತ್ಯವಾದ ಲೇಖನ. ಜೀವನವನ್ನು ಶಾಂತಿಯುತವಾಗಿ ಸಾಗಿಸಬೇಕೆಂದರೆ ಸ್ವಯಂ ನಿಯಂತ್ರಣ ಅಗತ್ಯ. ಸ್ವಯಂ ನಿಯಂತ್ರಣಕ್ಕೆ ನೀಡಿರುವ ಈ ಸಲಹೆಗಳನ್ನು ಪಾಲಿಸುವುದು ಯಶಸ್ಸಿನ ಸೋಪಾನವಾಗಬಲ್ಲದು.

–ಕೌಸ್ತುಭ, ಮೈಸೂರು

## ಮರೆಯದ ಹಿರಿಯರ ಮಾತು

ಕುಟುಂಬದಲ್ಲಿ, ಕಾರ್ಯಕ್ಷೇತ್ರದಲ್ಲಿ, ಸಮಾಜದಲ್ಲಿ ಸಮತೋಲನದ ಜೀವನಕ್ಕೆ ಸ್ವಯಂ ನಿಯಂತ್ರಣ ಅತ್ಯಂತ ಅಗತ್ಯ. 'ಪ್ರತಿಕ್ರಿಯಿಸುವ ಮುನ್ನ ಕೊಂಚ ವಿರಮಿಸು' ಈ ಮಾತನ್ನು ನಮ್ಮ ಹಿರಿಯರು ಹೇಳುತ್ತಲೇ ಬಂದಿದ್ದಾರೆ. ಆದರೆ ನಾವು ಕೇಳುತ್ತಿದ್ದೇವೆಯೇ? ಈಚೆಗೆ ಎಲ್ಲರಲ್ಲೂ ಸಂಯಮ ಕಡಿಮೆಯಾಗಿದೆ. ಶಾಲಾ ಕಾಲೇಜುಗಳಲ್ಲಿ 'ಮಾನಸಿಕ ಆರೋಗ್ಯ'ದ ಬಗ್ಗೆ ಉಪನ್ಯಾಸ ತರಗತಿ ಇದ್ದರೆ ಯುವಜನತೆಗೆ ಮತ್ತು ಒತ್ತಡದಲ್ಲಿ ಕೆಲಸ ಮಾಡುವವರಿಗೆ ಸಹಾಯ ಆಗಬಹುದು.

–ಕಮಲಾದೇವಿ ರಾಜಶೇಖರ ಹಳ್ಳೂರ್

## ಅಕಾಲ ಮೃತ್ಯುಕೂಪ

'ಅಜಾಗರೂಕತೆಯ ಅಪರಾಧ ಕ್ಷಮಾರ್ಹವಲ್ಲ' (ಮಾ. 05, ರಶ್ಮಿ ಎಸ್) 'ನಿಮ್ಮೊಡನೆ' ಔಚಿತ್ಯಪೂರ್ಣ ಬರಹ. ಅಪ್ರಾಪ್ತರಿಗೆ ವಾಹನದ ವ್ಯಾಮೋಹ ಹೆಚ್ಚಾಗಿದ್ದು, ಇದರ ದುಷ್ಪರಿಣಾಮ ಕುಟುಂಬದ ಮೇಲಷ್ಟೆ ಅಲ್ಲ, ಸಮಾಜದ ಮೇಲೂ ಆಗುತ್ತಿದೆ. ಕಾನೂನು ಕಟ್ಟಳೆಗಿಂತ ಪಾಲಕರು ಇದಕ್ಕೆ ಕಡಿವಾಣ ಹಾಕಿದಾಗ ಯುವಜೀವಗಳು ಅಕಾಲ ಮೃತ್ಯುಗೊಳಗಾಗುವುದನ್ನು ತಪ್ಪಿಸಬಹುದು.

–ಸಿ.ಕೆ. ಗಣಪ್ಪನವರ ಮುಂಡರಗಿ

## ತಪ್ಪದೇ ಓದಬೇಕು

'ಎಣ್ಣೆ ಮರ' (ಮಾ. 12, ಕೃತಿಕ ಟಿ.) ಕಥೆಯನ್ನು ಇಂದಿನ ಯುವಜನತೆ ತಪ್ಪದೇ ಓದಬೇಕು. ಯುವಕರು ಸದಾ ಮೊಬೈಲ್‌ನಲ್ಲೇ ಮುಳುಗಿರುವುದರಿಂದ ಈ ಕಥೆಯನ್ನೇ ಕಿರುಚಿತ್ರ



ತಯಾರಿಸಿದರೆ ನೋಡಬಹುದೇನೊ. ಯುವಕರು ಈ ರೀತಿ ಪರಿಸರಮಾಲಿನ್ಯ ಮಾಡಿ ತಮ್ಮ ಊರುಗಳನ್ನೇ ಹಾಳು ಮಾಡುತ್ತಿದ್ದಾರೆ. ಸರ್ಕಾರ ಆದಾಯ ಪಡೆದು ಪರಿಸರ ಸಂರಕ್ಷಣೆ ಮಾಡದೆ ಇರುವುದು ದುರದೃಷ್ಟಕರ.

–ಜಗದೀಶ ಬಿ. ಹೊಸೂರು, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in